ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-8 Issue-1, July-August 2026, Pp. 26-34
©*IIMRD*, Mysuru

IIMRD JOURNALS
www.iimrd.com

# ಮೈಸೂರು ರಾಜ್ಯದಲ್ಲಿ ನ್ಯಾಯಾಂಗ ವ್ಯವಸ್ಥೆ

**ರಾಜು ಸಿ[1] ಮತ್ತು ಡಾ.ಅಶ್ವತ್ಥ ನಾರಾಯಣ[2]**
[1]ಸಂಶೋಧನಾ ವಿದ್ಯಾರ್ಥಿ, [2]ನಿವೃತ್ತ ಪ್ರಾಧ್ಯಾಪಕರು,
ಇತಿಹಾಸ ವಿಭಾಗ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಸಾರಾಂಶ: (Abstract)**

*1881 ರಿಂದ 1947ರವರೆಗೆ ಮೈಸೂರು ರಾಜ್ಯದಲ್ಲಿ ನ್ಯಾಯಾಂಗ ವ್ಯವಸ್ಥೆಯು ಆಧುನಿಕ ಆಡಳಿತದ ಪ್ರಮುಖ ಅಂಗವಾಗಿ ರೂಪುಗೊಂಡಿತು. ಬ್ರಿಟಿಷರ ಆಡಳಿತಾತ್ಮಕ ಪ್ರಭಾವ ಹಾಗೂ ಮೈಸೂರು ಸಂಸ್ಥಾನದ ಸುಧಾರಣಾ ನೀತಿಗಳ ಪರಿಣಾಮವಾಗಿ ನ್ಯಾಯಾಂಗದಲ್ಲಿ ಹಲವು ಸಂಘಟನಾತ್ಮಕ ಬದಲಾವಣೆಗಳು ಜಾರಿಯಾದವು. ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಗೊಳಿಸುವುದು, ನ್ಯಾಯಾಲಯಗಳ ಹಂತವಾರು ರಚನೆ, ನ್ಯಾಯಾಧೀಶರ ನೇಮಕಾತಿ, ದಿವಾಣಿ ಮತ್ತು ಕ್ರಿಮಿನಲ್ ನ್ಯಾಯಾಲಯಗಳ ಕಾರ್ಯವ್ಯಾಪ್ತಿ ಹಾಗೂ ಕಾನೂನುಗಳ ಸಂಹಿತೀಕರಣದ ಮೂಲಕ ನ್ಯಾಯದ ಆಡಳಿತವನ್ನು ಹೆಚ್ಚು ಪರಿಣಾಮಕಾರಿ ಮತ್ತು ಪಾರದರ್ಶಕವಾಗಿಸಲಾಯಿತು. ಮುಖ್ಯ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯಗಳು, ಸೆಷನ್ಸ್ ನ್ಯಾಯಾಲಯಗಳು ನ್ಯಾಯ ವಿತರಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಭಾರತೀಯ ದಂಡ ಸಂಹಿತೆ 1860, ಅಪರಾಧ ಪ್ರಕ್ರಿಯಾ ಸಂಹಿತೆ ಮತ್ತು ದಿವಾಣಿ ಪ್ರಕ್ರಿಯಾ ಸಂಹಿತೆಗಳ ಅನುಷ್ಠಾನದಿಂಧ ನ್ಯಾಯಾಂಗ ವ್ಯವಸ್ಥೆಯಲ್ಲಿ ಏಕರೂಪತೆ ಮತ್ತು ಕಾನೂನುಬದ್ಧತೆ ಬಲವಾಯಿತು. ಈ ಅಧ್ಯಯನವು ಮೈಸೂರು ರಾಜ್ಯದ ನ್ಯಾಯಾಂಗ ವ್ಯವಸ್ಥೆಯ ಸಂಘಟನೆ, ಅಭಿವೃದ್ಧಿ, ಕಾರ್ಯವೈಖರಿ ಮತ್ತು ಆಡಳಿತಾತ್ಮಕ ಸುಧಾರಣೆಗಳನ್ನು ಐತಿಹಾಸಿಕ ದೃಷ್ಟಿಕೋನದಿಂದ ವಿಶ್ಲೇಷಿಸುತ್ತದೆ.*

**ಮುಖ್ಯಪದಗಳು (Keywords):** *ಕರ್ನಾಟಕ ಇತಿಹಾಸ, ಮೈಸೂರು ರಾಜ್ಯ, ನ್ಯಾಯಾಂಗ ವ್ಯವಸ್ಥೆ, ಕಾನೂನು, ನ್ಯಾಯಾಲಯಗಳು*

## ಪೀಠಿಕೆ

1881ರ ಆಡಳಿತ ಹಸ್ತಾಂತರದ ನಂತರ ರಾಜ್ಯದಲ್ಲಿ ನ್ಯಾಯಾಂಗ ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗಳು ಕಂಡುಬಂದಿತು. ಈ ಅವಧಿಯಲ್ಲಿ ಪರಂಪರಾಗತ ನ್ಯಾಯಪದ್ಧತಿಯಿಂದ ಆಧುನಿಕ ನ್ಯಾಯಾಂಗ ವ್ಯವಸ್ಥೆಯತ್ತ ಕ್ರಮೇಣ ಅಭಿವೃದ್ಧಿ ನಡೆಸಿದೆ. ನ್ಯಾಯ ವ್ಯವಸ್ಥೆಯ ಉದ್ದೇಶ ಸಮಾಜದಲ್ಲಿ ನ್ಯಾಯ, ಸಮಾನತೆ, ಕಾನೂನು ಸುವ್ಯವಸ್ಥೆ ಮತ್ತು ಶಾಂತಿಯನ್ನು ಕಾಪಾಡುವುದಾಗಿದೆ. ಆಡಳಿತ ವ್ಯವಸ್ಥೆಯಲ್ಲಿ ನ್ಯಾಯಾಂಗವು ಪ್ರಮುಖ ಅಂಗವಾಗಿದ್ದು, ರಾಜ್ಯದ ಆಡಳಿತ ಸುಧಾರಣೆಗಳಲ್ಲಿ ನ್ಯಾಯಾಂಗ

*Please cite this article as:* ರಾಜು ಸಿ ಮತ್ತು ಅಶ್ವತ್ಥ ನಾರಾಯಣ. (2026). ಮೈಸೂರು ರಾಜ್ಯದಲ್ಲಿ ನ್ಯಾಯಾಂಗ ವ್ಯವಸ್ಥೆ. *ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 8(1). ಪು.ಸಂ.* 26–34

ಸುಧಾರಣೆಗಳಿಗೆ ವಿಶೇಷ ಮಹತ್ವ ನೀಡಲಾಯಿತು. 1881ರ ನಂತರ ಮೈಸೂರು ರಾಜ್ಯದ ಆಡಳಿತವನ್ನು ಪುನಃ ಒಡೆಯರ ಆಡಳಿತಕ್ಕೆ ಹಸ್ತಾಂತರಿಸಲಾಯಿತು. ಈ ನಂತರ ಆಡಳಿತದ ವಿವಿಧ ಕ್ಷೇತ್ರಗಳಲ್ಲಿ ಸುಧಾರಣೆಗಳು ನಡೆದವು. ನ್ಯಾಯಾಂಗ ವ್ಯವಸ್ಥೆಯನ್ನು ಸಂಘಟಿತ ರೂಪದಲ್ಲಿ ಅಭಿವೃದ್ಧಿಪಡಿಸಿ ನ್ಯಾಯಾಲಯವನ್ನು ಹಂತಗಳಾಗಿ ವಿಭಾಗಿಸಲಾಯಿತು. ಗ್ರಾಮ, ತಾಲೂಕು, ಜಿಲ್ಲಾ ಮತ್ತು ಮೇಲ್ಮನವಿ ನ್ಯಾಯಾಲಯಗಳನ್ನು ಸ್ಥಾಪಿಸಿ ನ್ಯಾಯ ವ್ಯವಸ್ಥೆಯನ್ನು ವ್ಯವಸ್ಥಿತಗೊಳಿಸಲಾಯಿತು.

ಈ ಅವಧಿಯಲ್ಲಿ ಲಿಖಿತ ಕಾನೂನುಗಳನ್ನು ಪರಿಚಯಿಸಲಾಯಿತು ಮತ್ತು ಸಿವಿಲ್ ಹಾಗೂ ಕ್ರಿಮಿನಲ್ ನ್ಯಾಯ ವ್ಯವಸ್ಥೆಯನ್ನು ಪ್ರತ್ಯೇಕಗೊಳಿಸಲಾಯಿತು. ನ್ಯಾಯಾಧೀಶರನ್ನು ನೇಮಕ ಮಾಡುವ ಪದ್ಧತಿ ರೂಪಿಸಲಾಯಿತು ಮತ್ತು ಮೇಲ್ಮನವಿ ವ್ಯವಸ್ಥೆ ಸ್ಥಾಪಿಸಲಾಯಿತು. ನ್ಯಾಯಾಂಗ ಮತ್ತು ಪೊಲೀಸ್ ಇಲಾಖೆಗಳ ನಡುವೆ ಸಹಾಕಾರವನ್ನು ಸ್ಥಾಪಿಸಿ ಅಪರಾಧ ಪ್ರಕರಣಗಳ ತನಿಖೆ ಮತ್ತು ನ್ಯಾಯ ಪ್ರಕ್ರಿಯೆಯನ್ನು ಸಂಘಟಿತ ರೀತಿಯಲ್ಲಿ ನಡೆಸಲಾಯಿತು.

1881 ರಿಂದ 1947ರವರೆಗೆ ಮೈಸೂರು ರಾಜ್ಯದಲ್ಲಿ ನ್ಯಾಯಾಡಳಿತ ವ್ಯವಸ್ಥೆ ಕ್ರಮೇಣ ಆಧುನಿಕ ರೂಪವನ್ನು ಪಡೆದುಕೊಂಡಿತು. ರಾಜಪ್ರಭುತ್ವ ವ್ಯವಸ್ಥೆಯಲ್ಲಿ ಮೈಸೂರು ರಾಜ್ಯದಲ್ಲಿ ನ್ಯಾಯಾಲಯಗಳ ಸಂಘಟನೆ, ಕಾನೂನು ಸಂಹಿತೆಗಳ ಜಾರಿ, ಮೇಲ್ಮನವಿ ವ್ಯವಸ್ಥೆ ಮತ್ತು ನ್ಯಾಯಾಂಗದ ಸಂಘಟಿತ ಆಡಳಿತ ಇವು ನ್ಯಾಯ ವ್ಯವಸ್ಥೆಯನ್ನು ಬಲಪಡಿಸಿತು. 1881 ರಿಂದ 1947ರ ಅವಧಿಯಲ್ಲಿ ಮೈಸೂರು ರಾಜ್ಯದಲ್ಲಿ ನ್ಯಾಯಾಡಳಿತದ ವ್ಯವಸ್ಥೆ ಪರಂಪರಾಗತ ಪದ್ಧತಿಯಿಂದ ಆಧುನಿಕ ನ್ಯಾಯಾಂಗ ವ್ಯವಸ್ಥೆಯತ್ತ ಅಭಿವೃದ್ಧಿ ಹೊಂದಿದ್ದು, ನ್ಯಾಯ, ಸಮಾನತೆ ಮತ್ತು ಕಾನೂನು ಪ್ರಾಬಲ್ಯವನ್ನು ಸ್ಥಾಪಿಸುವಲ್ಲಿ ಪ್ರಮುಖ ಪಾತ್ರವಹಿಸಿತು.

**ನ್ಯಾಯಾಂಗ ವ್ಯವಸ್ಥೆ**

1856 ರಲ್ಲಿ ನ್ಯಾಯಾಂಗ ವ್ಯವಸ್ಥೆಗಾಗಿ ಜ್ಯುಡಿಷಿಯಲ್ ಕಮೀಷನರ್ ರವರ ನೇಮಕವಾಯಿತು. ಜುಡಿಷಿಯಲ್ ಕಮೀಷ್ನರ್ ರವರು ಇನ್ಸ್‌ಪೆಕ್ಟರ್ ಜನರಲ್ ರವರನ್ನು ನೇಮಿಸಿದರು. 1873ರಲ್ಲಿ ಅವರಿಗೆ ಸಹಾಯಕ್ಕಾಗಿ ಡಿಐಜಿ ಒಬ್ಬರು ನೇಮಕಗೊಂಡರು. ಇದೇ ಅವಧಿಯಲ್ಲಿ ಪ್ರಥಮ ದರ್ಜೆ ಇನ್ಸ್‌ಪೆಕ್ಟರ್, ದ್ವಿತೀಯ ದರ್ಜೆ ಇನ್ಸ್‌ಪೆಕ್ಟರ್, ಜಮಾದಾರ್, ದಫೇದಾರ್, ಪೊಲೀಸ್ ಪೇದೆ ಹುದ್ದೆಗಳನ್ನು ರಚಿಸಲಾಯಿತು. ಜಿಲ್ಲಾಧಿಕಾರಿಗೆ ಶಿರಸ್ತೇದಾರರೇ ಹೆಡ್‌ಕ್ವಾಟ್ರಸ್ ಅಸಿಸ್ಟೆಂಟ್. ಪೊಲೀಸ್ ಸಿಬ್ಬಂದಿಗೆ ವೇತನ ಪಾವತಿ ಇತ್ಯಾದಿ ಇವರ ಕೆಲಸ ಆಗಿತ್ತು. ತಾಲೂಕಿನಲ್ಲಿ ಅಮಲ್ದಾರರೇ ಪೊಲೀಸ್ ಮುಖ್ಯಾಧಿಕಾರಿ ಆಗಿ ಮುಂದುವರಿದರು. ಪ್ರಥಮ ದರ್ಜೆ ಇನ್ಸ್‌ಪೆಕ್ಟರ್, ದ್ವಿತೀಯ ದರ್ಜೆ ಇನ್ಸ್‌ಪೆಕ್ಟರ್ ರವರಿಗೆ ತಿಂಗಳಿಗೆ 10 ರೂ ಮನೆ ಭತ್ಯೆಯೊಂದಿಗೆ ಅನುಕ್ರಮವಾಗಿ 35 ರಿಂದ 50 ರೂ ವೇತನ ನಿಗದಿಪಡಿಸಲಾಯಿತು. ಜಮಾದಾರರು, ದಫೇದಾರ, ಪೊಲೀಸ್ ಪೇದೆಗಳು ಅನುಕ್ರಮವಾಗಿ ತಿಂಗಳಿಗೆ 20, 12, 8 ರೂ ವೇತನ ಪಡೆಯಲು ಆರಂಭಿಸಿದರು.

**ಪ್ರಥಮ ಐಜಿಪಿ**

1883ರಲ್ಲಿ ಪೊಲೀಸ್ ವ್ಯವಸ್ಥೆ ಪುನರ್‌ರಚಿಸಲು ಆಯೋಜಿಸಿದರು. ಆಗ 1885 ನೇ ನವಂಬರ್ 1 ರಂದು ಎಲ್. ರಿಕೆಟ್ಸ್, ಮೊದಲ ಹಳೆ ಮೈಸೂರು ರಾಜ್ಯಕ್ಕೆ ಐ.ಜಿ.ಪಿ ಆಗಿ ನೇಮಕ ಆದರು. ಇವರೇ ಹಳೇ

ಮೈಸೂರಿನ ಪ್ರಥಮ ಐ.ಜಿ.ಪಿ. ರಿಕೆಟ್ಸ್ ನಂತರ ಅವರ ಸ್ಥಾನದಲ್ಲಿ ವಿ. ಪಿ. ಮಾಧವರಾವ್ ಬಂದರು. ಬೆಂಗಳೂರು ಮೈಸೂರು ನಗರಗಳಿಗೆ ಪ್ರತ್ಯೇಕ ಪೊಲೀಸ್ ಪದ್ಧತಿಯನ್ನು ಜಾರಿಗೆ ತರಲಾಯಿತು. ಬೆಂಗಳೂರು ನಗರದ ಪೊಲೀಸ್ ವ್ಯವಸ್ಥೆಗೆ ಸರ್ಕಾರದ ಹಣ ಖರ್ಚು ಮಾಡಿತು. ಆದರೆ ಮೈಸೂರು ನಗರದ ಪೊಲೀಸ್ ನಿರ್ವಹಣೆಗೆ ಅಲ್ಲಿನ ನಗರಸಭೆ ಹಣ ಖರ್ಚು ಮಾಡಬೇಕಾಯಿತು. ಮೈಸೂರು, ಬೆಂಗಳೂರು ನಗರಗಳ ಕಥೆ ಒಂದಾಗಿದ್ದರೆ, ಯಳಂದೂರಿನ ಕಥೆಯೇ ಬೇರೆ. ಯಳಂದೂರು ಜಹಗೀರದಾರರೊಬ್ಬರಿಗೆ ಸೇರಿತ್ತು. ಅಲ್ಲಿನ ಪೊಲೀಸ್ ನಿರ್ವಹಣೆ ಅವರದೇ. ಅವರು ತಮಗೆ ಬೇಕಾದವರಿಗೆ ಪೊಲೀಸ್ ಕೆಲಸ ಒಪ್ಪಿಸುತ್ತಿದ್ದರು. ಯಳಂದೂರಿಗೆ ಅಲ್ಲಿಯ ಜಹಗೀರದಾರರೇ ಪೊಲೀಸ್ ಸೂಪರಿಂಟೆಂಡೆಂಟ್. 1884 ರಲ್ಲಿ ಈ ವ್ಯವಸ್ಥೆ ಕೊನೆಗೊಂಡಿತು. ಈ ಮಧ್ಯೆ ಪೊಲೀಸರ ಶಿಕ್ಷಣ ಕುರಿತು ಗಮನ ನೀಡಲಾಯಿತು. ಅಮಲ್ದಾರರನ್ನು ಬಿಟ್ಟರೆ ಬಹುತೇಕ ಸಿಬ್ಬಂದಿ ಅನಕ್ಷರಸ್ಥರಾಗಿದ್ದರು, ಇವರನ್ನು ಅಕ್ಷರಾಭ್ಯಾಸಮಾಡಿ ಎಂದು ಶ್ರೀ ವಿ. ಪಿ, ಮಾಧವರಾವ್ ಆದೇಶ ನೀಡಿದಾಗ ಅನಕ್ಷರಸ್ಥ ಪೊಲೀಸ್ ಸಿಬ್ಬಂದಿ ಹೋಬಳಿ ಶಾಲೆಗಳಿಗೆ ಹೋಗಲು ಆರಂಭಿಸಿದರು. 1892ರಲ್ಲಿ ಬೆಂಗಳೂರಿನಲ್ಲಿ ಜಮಾದಾರ, ದಫೇದಾರ ಪೊಲೀಸ್ ಪೇದೆಗಳಿಗೆ ತರಬೇತಿ ನೀಡುವ ಶಾಲೆ ತಲೆ ಎತ್ತಿ ನಿಂತಿತು. ವರ್ಷಕ್ಕೊಂದು ಬಾರಿ ಪರೀಕ್ಷೆ ನಡೆಸಿ ಪೊಲೀಸ್ ಪೇದೆಗಳ ಭರ್ತಿ ಕೆಲಸವನ್ನೂ ಅದು ಪ್ರಾರಂಭಿಸಿತು. ಬಡ್ತಿ ಕೊಡಲು ಸ್ಪರ್ಧಾತ್ಮಕ ಪರೀಕ್ಷೆಗಳೂ ನಡೆದವು. ಕಾಲ ಉರುಳಿದಂತೆ ಸಮಸ್ಯೆಗಳೂ ಕಾಣಿಸಿಕೊಂಡವು. ಯಾವ ಕ್ರಮ ಇಲ್ಲವೇ ಯಾವ ವಿಧಾನ ಅನುಸರಿಸಬೇಕು ಎಂಬುದೇ ಗೊತ್ತಿರಲಿಲ್ಲ. ಇಂತಹ ಸಂದರ್ಭದಲ್ಲಿ ಐ.ಜಿ.ಪಿ ಅವರಿಗೆ ಹೆಡ್‌ಕ್ವಾರ್ಟ್ರಸ್ ಪೊಲೀಸ್ ಇನ್ಸ್‌ಪೆಕ್ಟರ್ ಆಗಿದ್ದ ಶ್ರೀ. ಎನ್. ಲಕ್ಷ್ಮಣಶಾಸ್ತ್ರಿಗಳು ಪೊಲೀಸರಿಗೆ ಮಾರ್ಗದರ್ಶನ ನೀಡುವ ಕೈಪಿಡಿ ಪ್ರಕಟಿಸಿದರು.

**ಮಂತ್ರಿ**

1912 ರಲ್ಲಿ ಐ.ಜಿ.ಪಿ ಆಗಿದ್ದ ಡಿ. ದೇವರಾಜ್ ಅರಸು ವೆಲ್ಲೂರಿಗೆ ಹೋಗಿ ಅಲ್ಲಿಯ ಪೊಲೀಸ್ ತರಬೇತಿ ಶಾಲೆಯ ಶಿಕ್ಷಣ ಪದ್ಧತಿ ಅಭ್ಯಸಿಸಿದರು. ಇವರ ಕಾಲದಲ್ಲಿ ಬೆಂಗಳೂರು ಪೊಲೀಸ್ ತರಬೇತಿ ಶಾಲೆ ಅನೇಕ ಬದಲಾವಣೆಗಳನ್ನು ಕಂಡಿತು. ಅನಂತರ ಬಂದ ಸಿ. ಶ್ರೀಕಾತೇಶ್ವರ ಅಯ್ಯರ್ ತರಬೇತಿ ಶಾಲೆಗೆ ಕ್ರಿಮಿನಾಲಜಿ ಮ್ಯೂಸಿಯಂ ಒದಗಿಸಿದರು. ಐ.ಜಿ.ಪಿ, ದೇವರಾಜ ಅರಸರಿಗೆ ಬಡ್ತಿ ಸಿಕ್ಕಾಗ ಅವರು ಕೌನ್ಸಿಲರ್‌ಶಿಪ್ (ಸಂಪುಟ) ಸೇರಿದರು. ಐ.ಜಿ.ಪಿಗಳಲ್ಲಿ ಮಂತ್ರಿ ಆದವರ ಪೈಕಿ ಇವರೇ ಮೊದಲಿಗರು ಎಂದು ಹೇಳಬಹುದು. 1930ರಲ್ಲಿ ಎಫ್.ಎ.ಹ್ಯಾಮಿಲ್ಟನ್ ಅಧಿಕಾರಕ್ಕೆ ಬಂದರು. ಸುಮಾರು ಎಂಟು ವರ್ಷ ಐ.ಜಿ.ಪಿ ಆಗಿದ್ದರು. ಇವರ ಅಧಿಕಾರ ಅವಧಿಯಲ್ಲಿ ಪೊಲೀಸ್ ಇಲಾಖೆ ಬಹುತೇಕ ಬದಲಾವಣೆ ಕಂಡಿತು. ಕಾಲ ಉರುಳಿದಂತೆ ಎತ್ತಿನ ಬಂಡಿ, ಟಾಂಗಾಗಳ ಸಂಖ್ಯೆ ಹೆಚ್ಚಿತು. ರಸ್ತೆಗೆ ಸೈಕಲ್‌ಗಳು ಇಳಿದವು ಕಾರುಗಳ ಓಡಾಟ ಪ್ರಾರಂಭವಾಯಿತು. ರಸ್ತೆ ಸಂಚಾರ ನಿಯಂತ್ರಣದ ಸಮಸ್ಯೆ ಉದ್ಭವಿಸಿತು. ಹ್ಯಾಮಿಲ್ಟನ್ ಆಗ ಮೈಸೂರು, ಬೆಂಗಳೂರು ನಗರಗಳಲ್ಲಿ ಸಂಚಾರ ವಿಭಾಗ ರಚಿಸಿದರು. ಹಲಸೂರುಗೇಟ್, ಉಪ್ಪಾರ ಪೇಟೆ ಹಾಗೂ ಕಲಾಸಿಪಾಳ್ಯ ಪೊಲೀಸ್ ಠಾಣೆಗಳು ಸಂಚಾರ ನಿಯಂತ್ರಣದ ಜವಾಬ್ದಾರಿ ಹೊತ್ತವು. ಮೈಸೂರು ನಗರದಲ್ಲಿ ಯುರೋಪಿಯನ್ ಹೆಡ್‌ಕಾನ್ಸ್‌ಟೇಬಲ್ ಸಂಚಾರ ವಿಭಾಗದ ಮುಖ್ಯಸ್ಥರಾದರು. ಆದರೂ ಇವರ

ಸಂಬಳ ಭತ್ಯೆಗೆ ಅಮಲ್ದಾರರ ಸಹಿ ಬೇಕೇ ಬೇಕಾಗಿತ್ತು. ಕ್ರಮೇಣ ಎರಡು ನಗರಗಳಲ್ಲಿ ಪೊಲಿಸ್ ಪೇದೆಗಳಿಗೆ ಸೈಕಲ್ ಸೌಲಭ್ಯ ಒದಗಿತು. ಬೆಂಗಳೂರಿನ ಪೇದೆಗಳಿಗೆ ತಿಂಗಳಿಗೆ 7 ಮತ್ತು 8 ಪೈಸೆ ಸೈಕಲ್ ಭತ್ಯೆ ನಿಗದಿಪಡಿಸಲಾಯಿತು.

**ಪ್ರೊಬೇಷನರ್**

1932ರಲ್ಲಿ ಸುಶಿಕ್ಷಿತರನ್ನು ಪೊಲೀಸ್ ಇಲಾಖೆಗೆ ನೇಮಕಾತಿ ಮಾಡಿಕೊಳ್ಳುವ ಉದ್ದೇಶದಿಂದ ನೇರವಾಗಿ ಪ್ರೊಬೇಷನರಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳ ನೇಮಕ ಮಾಡಲಾಯಿತು. ರಾಜ್ಯದ ಐ.ಜಿ.ಪಿಯೇ ನೇಮಕ ಅಧಿಕಾರಿ. ವರ್ಷಕ್ಕೆ ಹತ್ತರಂತೆ ಪ್ರೊಬೇಷನರ್ ಪೊಲೀಸ್ ಇನ್ಸ್‌ಪೆಕ್ಟರ್ ನೇಮಕವಾದಂತೆ ಇಲಾಖೆಯಲ್ಲಿ ಸುಶಿಕ್ಷಿತರು ಕಾಲಿಡಲು ಪ್ರಾರಂಭಿಸಿದರು. ಸಾಹಸ, ಧೈರ್ಯ ತೋರಿಸಿದ ಹಾಗೂ ಅಪ್ರತಿಮ ಸೇವೆ ಸಲ್ಲಿಸಿದ ಸಿಬ್ಬಂದಿಗೆ ಪ್ರೋತ್ಸಾಹಿಸಲು ಸರ್ಕಾರ ತೀರ್ಮಾನಿಸಿತು. ಗಂಡ ಭೇರುಂಡ ಪದಕ ನೀಡಿ ಗೌರವಿಸಲು ನಿರ್ಧಾರ(1935) ಮಾಡಲಾಯಿತು. ಈ ಪದಕ ಪಡೆದ ಪೇದೆ ಇಲ್ಲವೆ ಅಧಿಕಾರಿಗಳು ತಿಂಗಳಿಗೆ 3 ರಿಂದ 12 ರೂ ಹೆಚ್ಚು ವೇತನ ಪಡೆದರು. ವಾಹನಗಳ ಸಂಖ್ಯೆ ಹೆಚ್ಚಿತು. ಅವುಗಳ ರಿಜಿಸ್ಟೇಷನ್, ಚಾಲಕರಿಗೆ ಲೈಸನ್ಸ್ ಕೊಡಲು ಆರಂಭಿಸಿದಾಗ ಬಸ್ ವಾರಂಟ್ ಪದ್ಧತಿ ಜಾರಿಗೆ ಬಂತು. ಇದಕ್ಕಾಗಿ ಐ.ಜಿ.ಪಿ ಕಛೇರಿ ಆವರಣದಲ್ಲಿ ವೇಬ್ರಿಜ್ ನಿರ್ಮಾಣ, ಬಸ್ ವಾರಂಟ್ ಉಸ್ತುವಾರಿಕೆಯನ್ನು ಪೊಲೀಸರಿಗೆ ವಹಿಸಲಾಯಿತು. ಈಗಲೂ ಇದು ಮುಂದುವರೆದಿದೆ.

**ಚಳುವಳಿ**

“1939 – ಸ್ವಾತಂತ್ರ್ಯ ಚಳುವಳಿಯ ಗಾಳಿ ಹಳೇ ಮೈಸೂರಿಗೂ ಬೀಸಿತು. ಪೊಲೀಸರಿಗೆ ಸತ್ಯಾಗ್ರಹ ಧರಣಿ ಎಂಬುದರ ಬಿಸಿ ತಟ್ಟಿತು. ಎಚ್. ಸಿದ್ದಯ್ಯ, ಟಿ. ಸುಬ್ರಹ್ಮಣ್ಯಂ, ಮಳವಳ್ಳಿ ವೀರಪ್ಪ ಸೇರಿ ಎರಡು ಸಾವಿರ ಮಂದಿ ಬಂಧಿತರಾದರು. ಇವರ ಪೈಕಿ 1641 ಮಂದಿ ವಿರುದ್ದ ಪೊಲೀಸರು ಮೊಕದ್ದಮೆ ಹೂಡಿದಾಗ ಇವರಿಗೆಲ್ಲ ಶಿಕ್ಷೆಯಾಯಿತು ಇದು ಆಗಿನ ಕಾಲದ ಭಾರೀ ಸುದ್ದಿ. ಬೆಂಗಳೂರಿನ ಗಾತ್ರ ಹೆಚ್ಚಿತು. ಜನ ಸಂಖ್ಯೆಯೂ ಏರಿತು. ಅಪರಾಧಗಳು ಹೆಚ್ಚಾದವು, ಪೊಲೀಸರಿಗೆ ಹೆಚ್ಚು ಕೆಲಸದ ಭಾರ ಬಿತ್ತು. ಆಗ 1944 ರಲ್ಲಿ ಬೆಂಗಳೂರು ನಗರಕ್ಕೆ ಎಂ. ಕೆ. ಸೋಮಪ್ಪ, ಡಿ.ಐ.ಜಿ ಆಗಿ ನೇಮಕಗೊಂಡರು.” ಈ ಮಧ್ಯೆ ಬೆಂಗಳೂರು ನಗರದಲ್ಲಿ ಬಿ.ಎನ್. ಗೋಪಾಲರಾವ್ ಎಂಬುವವರು ಖಾಸಗಿ ಬ್ಯಾಂಕ್ ಪ್ರಾರಂಭಿಸಿದರು. ಬ್ಯಾಂಕ್ ವ್ಯವಹಾರ ಕುರಿತು ದೂರುಗಳು ಬಂದವು ಇದು ಸಾರ್ವಜನಿಕರ ಗಮನ ಸೆಳೆಯಿತು. ಸರ್ಕಾರವು ನ್ಯಾಯಾಮೂರ್ತಿ ಆದ ಪಿ. ಮೇದಪ್ಪ ನಾಯಕತ್ವದಲ್ಲಿ ಎಸ್. ನಿಜಲಿಂಗಪ್ಪ. ಟೇಕೂರು ಸುಬ್ರಮಣ್ಯಂ, ಎನ್. ವೀರಪ್ಪ, ಎನ್. ಟಿ. ಬಾಬು ರೆಡ್ಡಿ ಇವರುಗಳ ಆಯೋಗವನ್ನು ನೇಮಿಸಿತು. ಪೊಲೀಸ್ ಅಧಿಕಾರಿ ಆಗಿದ್ದ ಬಾಬು ರೆಡ್ಡಿ ಆಯೋಗದ ಕಾರ್ಯದರ್ಶಿಗಳು ಆಗಿದ್ದರು. ಆಯೋಗದ ಶಿಫಾರಸ್ಸನ್ನು ಮನ್ನಿಸಿ ಬಾಬುರೆಡ್ಡಿ ಅವರಿಗೆ 150 ರೂ ಸಂಬಳ ಹೆಚ್ಚಿಸಿತು.

**ಹೈದ್ರಾಬಾದ್**

ಹೈದ್ರಾಬಾದ್ ನಿಜಾಮರ ಸಂಸ್ಥಾನಕ್ಕೆ ಸೇರಿದ ಗುಲ್ಬರ್ಗ, ರಾಯಚೂರು, ಬೀದರ್ ಜಿಲ್ಲೆಗಳಲ್ಲಿ ಪೊಲೀಸ್ ವ್ಯವಸ್ಥೆಗೆ ಸದರ್–ಅಲಿ–ಮೋಹಂ ಇಲ್ಲವೆ ಪೊಲೀಸ್ ಮಿನಿಸ್ಟರ್ ಎಂಬ ಪದ ಬಳಕೆಯಲ್ಲಿತ್ತು.

ತಾಲ್ಲೂಕುಗಳಲ್ಲಿ ಅಮೀನದಾರರು, ಇನ್ಸ್‌ಪೆಕ್ಟರ್ ಪೊಲೀಸ್ ಮುಖ್ಯಸ್ಥರು. ಇದರ ಜೊತೆಗೆ ನಿಜಾಮರ ದಿವಾನಿ ಪೊಲೀಸ್ ಹಾಗೂ ಜಹಗೀರ ಪೊಲೀಸ್ ಪದ್ದತಿಯೂ ಇತ್ತು. ಇಲ್ಲಿ ಇದ್ದ ಜಹಗೀರುದಾರರೇ ಜಹಗಾರ ಪೊಲೀಸರಾಗಿ ನೇಮಿಸಿದರು. ಜಹಗೀರುದಾರರ ಆಸ್ತಿ–ಸ್ವತ್ತು ರಕ್ಷಿಸುವುದೇ ಇವರ ಕೆಲಸ. 1948ರಲ್ಲಿ ಹೈದ್ರಾಬಾದ್ ಸಂಸ್ಥಾನ ಭಾರತದಲ್ಲಿ ವಿಲೀನವಾದಾಗ ಈ ಪದ್ದತಿ ಕೊನೆಗೊಂಡಿತು.

**ಸಾರಿಗೆ ವ್ಯವಸ್ಥೆ**

1928 ರಲ್ಲಿ ಸೈಕಲ್‌ಗಳನ್ನು ಹೊಂದಿದ್ದ ಪೊಲೀಸ್ ಇಲಾಖೆ ಇಂದು ತನ್ನದೇ ಆದ ಸಾರಿಗೆ ವ್ಯವಸ್ಥೆ ಪಡೆದಿದೆ. 1929–30 ರಲ್ಲಿ ಬರಿ ಮೂರು ಬಸ್ಸುಗಳನ್ನು ಹೊಂದಿದ್ದ ಇಲಾಖೆ ಇಂದು ಬಸ್ಸು, ಟೆಂಪೋ, ಜೀಪು, ಮೋಟಾರ್ ಸೈಕಲ್ ಕಾರು ಇತ್ಯಾದಿ ವಾಹನಗಳನ್ನು ಹೊಂದಿದೆ. ವಾಹನಗಳ ದುರಸ್ತಿ, ಚಾಲಕರಿಗೆ ತರಬೇತಿ ಹೊಣೆಯನ್ನು ಈ ಶಾಖೆ ನಿರ್ವಹಿಸುತ್ತಿದೆ.

**ಕರ್ನಾಟಕ**

1799ರ ಟಿಪ್ಪು ಸುಲ್ತಾನನ ಮರಣದ ನಂತರ ಬ್ರಿಟಿಷರು ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಮೈಸೂರು ಪೊಲೀಸ್ ವ್ಯವಸ್ಥೆ ಜಾರಿಗೆ ತರುವಲ್ಲಿ ಶ್ರಮಿಸಿದರು. ದಿವಾನರ ಕಾಲದಲ್ಲಿ ಸುಮಾರು ಮೂರು ಕಮೀಷನರ್‌ಗಳು ಮತ್ತು ಅಮಲ್‌ದಾರರು, ಸರಿಸುಮಾರು 115 ರಿಂದ 120 ತಾಲ್ಲೂಕುಗಳ ಪೊಲೀಸ್ ಆಡಳಿತವನ್ನು ನಿಭಾಯಿಸುತ್ತಿದ್ದರು. 1861ರ ಭಾರತೀಯ ಪೊಲೀಸ್ ಕಾಯ್ದೆಯನ್ನು ಬೆಂಗಳೂರು ಮತ್ತು ಬೆಂಗಳೂರು ನಗರದಲ್ಲಿ ಜಾರಿಗೆ ತರಲಾಯಿತು. ಒಬ್ಬ ಅಧಿಕಾರಿಯನ್ನು ಬೆಂಗಳೂರು ಜಿಲ್ಲೆ ಮದ್ರಾಸ್ ಪ್ರಾಂತ್ಯದ ಅಧಿಕಾರಿಯನ್ನು ನೇಮಿಸಲಾಯಿತು. ಒಟ್ಟಾರೆ ಪೊಲೀಸ್ ಇಲಾಖೆಯ ಜವಾಬ್ದಾರಿಯನ್ನು ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳಿಗೆ ವಹಿಸಲಾಯಿತು. ಅಮಲ್‌ದಾರರಿಗೆ ತಾಲೂಕಿನ ಉಸ್ತುವಾರಿಯನ್ನು ವಹಿಸಲಾಯಿತು. ಅಮಲ್‌ದಾರರ ಅಧೀನದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್‌ಗಳು ಕಾರ್ಯನಿರ್ವಹಿಸುತ್ತಿದ್ದರು. 1881ರ ತರುವಾಯ ಪೊಲೀಸ್ ಇಲಾಖೆಯ ಮಾರ್ಗದರ್ಶನವನ್ನು ದಿವಾನ ಮತ್ತು ಡೆಪ್ಯೊಟಿ ಕಮಿಷನರ್‌ಗಳಿಗೆ ನೀಡಲಾಯಿತು. ದಿವಾನರಿಗೆ ಈ ಕೆಲಸದಲ್ಲಿ ಸಹಾಯ ಮಾಡಲು ಸಹಕಾರ್ಯದರ್ಶಿ ನೇಮಕ ಮಾಡಲಾಯಿತು.

1885 ರಲ್ಲಿ ಪೊಲೀಸ್ ಕಾರ್ಯದರ್ಶಿ ಹುದ್ದೆಯನ್ನು ವಜಾಗೊಳಿಸಿ ಇನ್ಸ್‌ಪೆಕ್ಟರ್ ಅಫ್ ಜನರಲ್ ಹುದ್ದೆಯನ್ನು ಸ್ಥಾಪಿಸಲಾಯಿತು. ಬೆಂಗಳೂರು ಹಾಗೂ ಮೈಸೂರು ಜಿಲ್ಲೆಗಳಲ್ಲಿ ಅವರದೇ ಆದ ಪೊಲೀಸ್ ಪಡೆಗಳನ್ನು ಹೊಂದಿದ್ದರು. ಇವುಗಳ ಖರ್ಚು ವೆಚ್ಚಗಳನ್ನು ಆ ನಗರಗಳ ನಗರಸಭೆಯಿಂದಲೇ ಭರಿಸಲಾಗುತ್ತಿತ್ತು. ಉಳಿದ ಇತರ ಭಾಗಗಳ ಪೊಲೀಸ್ ಪಡೆಗಳ ಖರ್ಚು ವೆಚ್ಚವನ್ನು ಮೈಸೂರು ಪ್ರಾಂತ್ಯದ ಹಣದಿಂದ ನೋಡಿಕೊಳ್ಳಲಾಗುತ್ತಿತ್ತು.

ನಂತರ 1930–31ರ ಅವಧಿಯಲ್ಲಿ ಕಮೀಷನರ್ ಮತ್ತು ಸೂಪರಿಂಟೆಂಡೆಂಟ್‌ಗಳನ್ನು ನೇಮಿಸಿ ಸೂಪರಿಂಟೆಂಡೆಂಟ್‌ರಿಗೆ ಪೊಲೀಸ್ ಇಲಾಖೆಯ ಜವಾಬ್ದಾರಿ ನೀಡಲಾಯಿತು ಮತ್ತು ಕಮೀಷನರಿಗೆ ನಾಮಾಂಕಿತ ಜಿಲ್ಲೆಯ ಒಟ್ಟಾರೆ ಪೊಲೀಸ್ ಅಧಿಕಾರವನ್ನು ನೀಡಲಾಯಿತು.

**ಮಹಾರಾಷ್ಟ್ರ**

ಮಹಾರಾಷ್ಟ್ರ ಪೊಲೀಸ್ ವ್ಯವಸ್ಥೆಯ ಬೆಳವಣಿಗೆಯು ಇತರ ಉಪಖಂಡದ ಪೊಲೀಸ್ ವ್ಯವಸ್ಥೆಯ ಬೆಳವಣಿಗೆಯ ರೀತಿಗೆ ಸಮೀಪವರ್ತಿಯಾಗಿದೆ. ಮೊಘಲರು ಮಹಾರಾಷ್ಟ್ರದ ಆಡಳಿತವನ್ನು ದೆಹಲಿಯಿಂದ ಡೆಕ್ಕನ್‌ವರೆಗೂ ಆಡಳಿತ ನಡೆಸುತ್ತಿದ್ದರು. ಮಹಾರಾಷ್ಟ್ರ ಭಾಗವು ಹಿಂದೂ ರಾಜ ಶಿವಾಜಿ ಮತ್ತು ಪೇಶ್ವೆಯರ ಅಧೀನದಲ್ಲಿತ್ತು. 1650–1707 ರವರೆಗೆ 1858ರ ನಂತರ ಬ್ರಿಟಿಷ್ ಆಡಳಿತ ಶುರುವಾದ ತರುವಾಯ ಮುಂಬೈ ಪ್ರಾಂತ್ಯದ ಪೊಲೀಸ್ ವ್ಯವಸ್ಥೆಯನ್ನು ಸರಿಪಡಿಸಿ ತಹಬದಿಗೆ ತಂದು ಅದರ ಕಾರ್ಯಕ್ಷಮತೆಯನ್ನು ಹೆಚ್ಚಿಸುವಂತಹ ಹಲವಾರು ಕ್ರಮಗಳನ್ನು ಬ್ರಿಟಿಷರು ಚಾಲನೆಗೆ ತಂದರು. ಬಂಗಾಲ ಮತ್ತು ಮದರಾಸು ಪ್ರಾಂತ್ಯಗಳಲ್ಲಿ ಪೊಲೀಸ್ ಕಾರ್ಯಕ್ಷಮತೆ ಹೆಚ್ಚಿಸುವಂತಹ ಹಲವಾರು ಸುಧಾರಣಾ ಕ್ರಮಗಳನ್ನು ಬ್ರಿಟಿಷರು ಜಾರಿಗೆ ತಂದರು. ಇದೇ ಕ್ರಮಗಳನ್ನು ಮುಂಬೈ ಹೊರತು ಉತ್ತರ ಮಹಾರಾಷ್ಟ್ರದ ಭಾಗಗಳಲ್ಲಿ ಜಾರಿಯಾಗುತ್ತಿತ್ತು. ಮುಂಬೈ ಭಾಗವು ಪೇಶ್ವೆಯರ ಅಧೀನದಲ್ಲಿತ್ತು. 1818ರಿಂದ ಪೇಶ್ವೆಯರ ಪತನದ ನಂತರ ಮುಂಬೈ ಭಾಗವು ಬ್ರಿಟಿಷರ ವಶವಾಯಿತು. ಮರಾಠ ಮತ್ತು ಪೇಶ್ವೆಯರ ಕಾಲದಲ್ಲಿಯೂ ಪೊಲೀಸ್ ವ್ಯವಸ್ಥೆಯು ಜಾರಿಯಲ್ಲಿತ್ತು. ಹಳ್ಳಿಗಳಲ್ಲಿ ಹಳ್ಳಿಯ ಪ್ರಮುಖನು ಹಳ್ಳಿಯ ಕಾವಲುಗಾರನಾಗಿದ್ದನು. ಅವನಿಗೆ ಪಟೇಲ್ ಎಂದು ಸಂಭೋದಿಸುತ್ತಿದ್ದರು. ಇವನಿಗೆ ಸಹಾಯಕರಾಗಿ ಕೆಲವು ಗುಂಪಿನ ಜನರಾದ ರಾಮೋಶಿಸ್ ಭಿಲ್ಸ್‌ಗಳು ಹಳ್ಳಿಯ ಹೊರ ಭಾಗದಲ್ಲಿದ್ದು ಪಾಟೀಲರ ಅಧೀನದಲ್ಲಿದ್ದರು. ಮತ್ತು ಅವರ ನಿರ್ದೇಶನದಂತೆ ಹಳ್ಳಿಯ ಅಪರಾಧಗಳ ಬಗ್ಗೆ ನಿಗಾ ಇಟ್ಟು ಮಾಹಿತಿಯನ್ನು ಪಾಟೀಲನಿಗೆ ನೀಡುತ್ತಿದ್ದರು. ಹಳ್ಳಿಯ ಪರೀರನು ಸರ್ಕಾರಕ್ಕೆ ಹಳ್ಳಿಯ ಕಾನೂನು ಸುವ್ಯವಸ್ಥೆ ಮತ್ತು ಅಪರಾಧ ಚಟುವಟಿಕೆಗಳ ಬಗ್ಗೆ ಸರ್ಕಾರಕ್ಕೆ ಮಾಹಿತಿ ಒದಗಿಸುತ್ತಿದ್ದನು. ಜನರು ಕಳೆದುಕೊಂಡಂತಹ ಆಸ್ತಿ ಪಾಸ್ತಿಗೆ ಹಳ್ಳಿಯ ಪ್ರಮುಖನು ಕಳೆದುಕೊಂಡ ವ್ಯಕ್ತಿಗೆ ಹಿಂದಿರುಗಿಸಬೇಕಾಗಿತ್ತು. ತಾಲೂಕುಗಳ ಉಸ್ತುವಾರಿಗೆ ಮಮಲ್ತ್‌ದಾರ್ ಎಂಬ ಅಧಿಕಾರಿಯು ಇದ್ದನು. ಅವನಿಗೆ ಸೂಕ್ತ ಸಿಬ್ಬಂದಿಯನ್ನು ವ್ಯವಸ್ಥೆ ಮಾಡಿದ್ದರು. ಭಾಜಿರಾವನ ಆಡಳಿತದಲ್ಲಿ ಜಿಲ್ಲಾ ಪೊಲೀಸ್ ವ್ಯವಸ್ಥೆಯನ್ನು ಸುಧಾರಿಸಿ ಈಗಿನ ತನಿಖಾಧಿಕಾರಿಯ ತರಹ ತಪಸ್‌ಸ್ಮಿಸ್ ಎಂಬ ಅಧಿಕಾರಿಯನ್ನು ನೇಮಿಸಲಾಯಿತು. ಈ ಅಧಿಕಾರಿಗೆ ಹೇಯ ಕೃತ್ಯಗಳಲ್ಲಿ ಭಾಗವಹಿಸುವಂತಹ ವ್ಯಕ್ತಿಗಳನ್ನು ತಂದು ಹಿಡಿದು ಬಂಧಿಸುವ ಜವಾಬ್ದಾರಿ ನೀಡಲಾಯಿತು. ಈ ಅಧಿಕಾರಿಗಳು ಮಮಲ್ತ್‌ದಾರನ ಅಧಿಕಾರ ವ್ಯಾಪ್ತಿಯ ಹೊರತಾಗಿ ಸರ್ಕಾರದ ನೇರ ಅಧೀನದಲ್ಲಿ ಕೆಲಸ ನಿರ್ವಹಿಸುತ್ತಿದ್ದನು. (ಈಗಿನ Central Bureau of Investigation ಇರುವ ರೀತಿಯಲ್ಲಿ) ನಗರ ಪ್ರದೇಶಗಳಲ್ಲಿ ದಂಡಾಧಿಕಾರಿಯಾಗಿ ಅಥವಾ ವರಿಷ್ಠಾಧಿಕಾರಿಯಾಗಿ ಕೊತ್ವಾಲ ಇದ್ದನು. ಇವನಿಗೆ ಕಂದಾಯ ವಸೂಲಿಯ ಜವಾಬ್ದಾರಿಯನ್ನು ನೀಡಲಾಯಿತು. ಈ ಕೊತ್ವಾಲನು ಕೌಟಿಲ್ಯನ ಅರ್ಥ ಶಾಸ್ತ್ರದಲ್ಲಿ ಬರುವಂತೆ ನಾಗರ್ಕನಿಗೆ ಸಮನಾಗಿದ್ದನು. ಸಹಾಯಕನಾಗಿದ್ದನು. ಈ ರೀತಿಯ ಕಾನೂನು ಸುವ್ಯವಸ್ಥೆಯ ನೀತಿಯನ್ನು ಬ್ರಿಟಿಷರು ತಾವು ಜಾರಿಗೆ ತಂದಂತಹ ಪೊಲೀಸ್ ವ್ಯವಸ್ಥೆಗಿಂತ ಸರಿ/ಉತ್ತಮ ಎಂದು ಪರಿಗಣಿಸಿ ಪ್ರೋತ್ಸಾಹಿಸಿದ್ದರು. ಬ್ರಿಟಿಷರ ವಿರುದ್ಧ ನಡೆಯಬಹುದಾದಂತ ದಂಗೆಗಳನ್ನು ಹತ್ತಿಕ್ಕುವ ಸಲುವಾಗಿ ಹಲವಾರು ಅರೆ ಸೇನಾಪಡೆಗಳನ್ನು ಉದಾ : ಕಂದೇಶ್ ಬಿಲ್ ಕಾರ್ಪ್ಸ್, ಅಹಮದಾನಗರ ಪೊಲೀಸ್ ಕಾರ್ಪ್ಸ್ ರತ್ನಗಿರಿ ರೇಂಜರ್ ಇತ್ಯಾದಿ

ಪಡೆಗಳನ್ನು ಈಗಿನ ಅರೆ ಸೇನಾ ಪಡೆಗಳಂತೆ ವ್ಯವಸ್ಥೆ ಮಾಡಿದ್ದರು. 1843ರಲ್ಲಿ ಸಿಂದ್ ಪ್ರಾಂತ್ಯವನ್ನು ವಶಪಡಿಸಿಕೊಂಡು ಮುಂಬೈ ಪ್ರಾಂತ್ಯದ ಅಧೀನಕ್ಕೆ ತಂದರು.

1890 ರಲ್ಲಿ ಮುಂಬೈ ಜಿಲ್ಲಾ ಪೊಲೀಸ್ ಕಾಯ್ದೆಯನ್ನು ಜಾರಿಗೆ ತಂದು ಮುಂಬೈ ಜಿಲ್ಲಾ ಪೋಲೀಸ್ ಸಂಘಟನೆಯನ್ನು ಪುನರ್ ಸ್ಥಾಪಿಸಲಾಯಿತು. 1902ರ ಅಖಿಲ ಭಾರತ ಪೊಲೀಸ್ ಕಮೀಷನ್ ಶಿಫಾರಸ್ಸಿನಂತೆ ಮುಂಬೈ ಪ್ರಾಂತ್ಯದ ಪೊಲೀಸ್ ಸಂಘಟನೆಯನ್ನು ಪುನರ್ ಸ್ಥಾಪಿಸಲಾಯಿತು. 1947ರ ಸ್ವಾತಂತ್ರ್ಯದ ವಿಭಜನೆಯ ಮುಂಚೆ ಮುಂಬೈ ಪ್ರಾಂತ್ಯವು ಕೆಲವು ಕರ್ನಾಟಕ ಭಾಗ ಗುಜರಾತಿನ ಭಾಗಗಳನ್ನು ಒಳಗೊಂಡಿತ್ತು. 1960ರ ರಾಜ್ಯ ಪುನರ್ ಸಂಘಟನೆಯ ಶಿಫಾರಸ್ಸಿನಂತೆ ಮುಂಬೈ ಕರ್ನಾಟಕ ಮತ್ತು ಮರಾಠ ರಾಜ್ಯಗಳನ್ನೊಳಗೊಂಡ ಕೆಲವು ಗುಜರಾತ್ ಭಾಗಗಳನ್ನು ಬೇರ್ಪಡಿಸಿ ಮಹಾರಾಷ್ಟ್ರ ರಾಜ್ಯವನ್ನು ಸ್ಥಾಪಿಸಲಾಯಿತು. ಮತ್ತು ಮಹಾರಾಷ್ಟ್ರಾದ್ಯಂತ ಏಕರೂಪ ಪೊಲೀಸ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಮುಂಬೈ ನಗರಕೇಂದ್ರದಲ್ಲಿ ಮುಂಬೈ ಪೊಲೀಸ್ ಮುಂಬೈ ಮಹಾನಗರಗಳಲ್ಲಿ ಪೊಲೀಸ್ ಕಮೀಷನರುಗಳು ಇದ್ದರು. ಈ ಮಹಾನಗರಗಳ ಪೊಲೀಸ್ ಪಡೆಗಳಲ್ಲಿ ಮಹಿಳಾ ಪೊಲೀಸರನ್ನು ನೇಮಿಸಲಾಗಿತ್ತು.

**ನ್ಯಾಯಾಂಗದ ಮೇಲೆ ಮೈಸೂರು ದಿವಾನರ ಪ್ರಭಾವ :**

ಮೈಸೂರು ಸಂಸ್ಥಾನವು ಭಾರತದ ಅತ್ಯಂತ ಪ್ರಗತಿಪರ ಸಂಸ್ಥಾನಗಳಲ್ಲಿ ಒಂದಾಗಿದ್ದು, ಅದರ ಆಡಳಿತ, ಶಿಕ್ಷಣ, ಆರ್ಥಿಕ ಮತ್ತು ನ್ಯಾಯಾಂಗ ವ್ಯವಸ್ಥೆಗಳು ದೇಶದ ಇತರ ಸಂಸ್ಥಾನಗಳಿಗೆ ಮಾದರಿಯಾಗಿದ್ದವು. ವಿಶೇಷವಾಗಿ 1881ರ ಮೈಸೂರು ಮರುಹಸ್ತಾಂತರ ನಂತರ ಮೈಸೂರು ಮಹಾರಾಜರ ಆಡಳಿತ ಪುನಃ ಸ್ಥಾಪನೆಯಾದಾಗ, ನ್ಯಾಯಾಂಗ ವ್ಯವಸ್ಥೆಯನ್ನು ಆಧುನಿಕ ಹಾಗೂ ಸುಸಂಘಟಿತ ರೂಪದಲ್ಲಿ ಅಭಿವೃದ್ಧಿಪಡಿಸುವ ಕಾರ್ಯದಲ್ಲಿ ದಿವಾನರು ಅತ್ಯಂತ ಮಹತ್ವದ ಪಾತ್ರವಹಿಸಿದರು. ದಿವಾನರು ಕೇವಲ ಆಡಳಿತದ ಮುಖ್ಯಸ್ಥರಾಗಿರದೆ, ಕಾನೂನು, ನ್ಯಾಯಾಂಗ ಆಡಳಿತ ಮತ್ತು ನ್ಯಾಯ ವಿತರಣೆಯ ಸುಧಾರಣೆಗಳಿಗೆ ಮಾರ್ಗದರ್ಶಕರಾಗಿದ್ದರು.

1881 ರಿಂದ 1947ರವರೆಗೆ ಕಾರ್ಯನಿರ್ವಹಿಸಿದ ದಿವಾನರಲ್ಲಿ ಸಿ.ವಿ.ರಂಗಾಚಾರ್ಲು, ಕೆ.ಶೇಷಾದ್ರಿ ಅಯ್ಯರ್, ಸರ್.ಎಂ.ವಿಶ್ವೇಶ್ವರಯ್ಯ, ಎ.ಆರ್.ಬ್ಯಾನರ್ಜಿ, ಮಿರ್ಜಾ ಇಸ್ಮಾಯಿಲ್ ಹಾಗೂ ಎ.ಆರ್.ಮುದಲಿಯಾರ್ ಮೊದಲಾದವರು ನ್ಯಾಯಾಂಗದ ಬಲವರ್ಧನೆಗೆ ಗಮನಾರ್ಹ ಕೊಡುಗೆ ನೀಡಿದರು. ಇವರ ಆಡಳಿತದಲ್ಲಿ ನ್ಯಾಯಾಲಯಗಳ ಕಾರ್ಯಕ್ಷಮತೆ ಹೆಚ್ಚಿಸಲಾಯಿತು. ನ್ಯಾಯಾಂಗದ ಆಡಳಿತವನ್ನು ಕ್ರಮಬದ್ಧಗೊಳಿಸಲಾಯಿತು ಹಾಗೂ ನಾಗರಿಕರಿಗೆ ನ್ಯಾಯವನ್ನು ಸುಲಭವಾಗಿ ತಲುಪಿಸುವ ಕ್ರಮಗಳನ್ನು ಕೈಗೊಳ್ಳಲಾಯಿತು. ದಿವಾನರ ಆಡಳಿತದಲ್ಲಿ ಜಿಲ್ಲಾ ನ್ಯಾಯಾಲಯಗಳು, ಮುನ್ಸಿಫ್ ನ್ಯಾಯಾಲಯಗಳು ಮತ್ತು ಸೆಷನ್ಸ್ ನ್ಯಾಯಾಲಯಗಳ ಕಾರ್ಯ ವ್ಯಾಪ್ತಿಯನ್ನು ದಾಖಲಾತಿ ನಿರ್ವಹಣೆ, ನ್ಯಾಯಾಧೀಶರ ನೇಮಕಾತಿ, ನ್ಯಾಯಾಂಗ ಸಿಬ್ಬಂದಿಯ ಕಾರ್ಯವಿಧಾನ ಹಾಗೂ ಪ್ರಕರಣಗಳ ತ್ವರಿತ ವಿಲೇವಾರಿಗೆ ಅಗತ್ಯವಾದ ಆಡಳಿತಾತ್ಮಕ ಕ್ರಮಗಳನ್ನು ಜಾರಿಗೊಳಿಸಲಾಯಿತು. ಈ ಸುಧಾರಣೆಗಳಿಂದ ನ್ಯಾಯಾಂಗವು ಹೆಚ್ಚು ಪರಿಣಾಮಕಾರಿ, ಪಾರದರ್ಶಕ ಮತ್ತು ಜನಸ್ನೇಹಿಯಾಗಿ ರೂಪುಗೊಂಡಿತು.

ವಿಶೇಷವಾಗಿ ಈ ಅವಧಿಯಲ್ಲ ಸರ್. ಶೇಷಾದ್ರಿ ಅಯ್ಯರ್ (1883–1901) ಅವರ ಅವಧಿಯಲ್ಲಿ ನ್ಯಾಯಾಂಗದ ಸಂಘಟನೆಗೆ ಭದ್ರ ಅಡಿಪಾಯ ಹಾಕಲಾಯಿತು. ಸರ್.ಎಂ.ವಿಶ್ವೇಶ್ವರಯ್ಯ(1912–1918) ನ್ಯಾಯಾಂಗದ ಕಾರ್ಯಕ್ಷಮತೆ, ಶಿಸ್ತು ಮತ್ತು ಆಡಳಿತದ ದಕ್ಷತೆಗೆ ಒತ್ತು ನೀಡಿದರು. ಸರ್ ಮಿರ್ಜಾ ಇಸ್ಮಾಯಿಲ್ (1926–1941) ಅವರ ಕಾಲದಲ್ಲಿ ನ್ಯಾಯಾಂಗದ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವುದರ ಜೊತೆಗೆ ನ್ಯಾಯ ಸೇವೆಯನ್ನು ತಾಲ್ಲೂಕು ಮತ್ತು ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸುವ ಕಾರ್ಯಕ್ಕೆ ಆದ್ಯತೆ ನೀಡಲಾಯಿತು. ಈ ಅವಧಿಯಲ್ಲಿ ನ್ಯಾಯಾಂಗವು ಕೇವಲ ವಿವಾದಗಳನ್ನು ಬಗೆಹರಿಸುವ ಸಂಸ್ಥೆಯಾಗಿರದೆ, ಕಾನೂನಿನ ಆಳ್ವಿಕೆ ಆಡಳಿತದಲ್ಲಿ ಉತ್ತರಾದಾಯಿತ್ವ ಮತ್ತು ನಾಗರಿಕ ಹಕ್ಕುಗಳ ರಕ್ಷಣೆಯನ್ನು ಖಾತ್ರಿಪಡಿಸುವ ಪ್ರಮುಖ ಅಂಗವಾಗಿ ಬೆಳೆಯಿತು. ದಿವಾನರ ದೂರದೃಷ್ಟಿಯ ಆಡಳಿತದಿಂದ ಮೈಸೂರು ನ್ಯಾಯಾಂಗವು ಬ್ರಿಟಿಷ್ ಭಾರತದ ಅನೇಕ ಸಂಸ್ಥಾನಗಳಿಗೆ ಮಾದರಿಯಾಯಿತು. ಹಾಗೂ ಸ್ವಾತಂತ್ರ್ಯೋತ್ತರ ಕರ್ನಾಟಕದ ನ್ಯಾಯಾಂಗ ವ್ಯವಸ್ಥೆಯ ಬೆಳವಣಿಗೆಗೆ ಬಲವಾದ ಅಡಿಪಾಯವನ್ನು ಒದಗಿಸಿತು.

**ಉಪಸಂಹಾರ**

ಮೈಸೂರು ರಾಜ್ಯದಲ್ಲಿ ನ್ಯಾಯಾಂಗ ವ್ಯವಸ್ಥೆಯು 1881 ರಿಂದ 1947ರವರೆಗೆ ಗಮನಾರ್ಹವಾದ ಅಭಿವೃದ್ಧಿಯನ್ನು ಕಂಡಿತು. 1881ರ ರೆಂಡಿಷನ್ ನಂತರ ಮೈಸೂರು ಸಂಸ್ಥಾನವು ನ್ಯಾಯಾಂಗ ಕ್ಷೇತ್ರದಲ್ಲಿ ಹಲವು ಆಡಳಿತಾತ್ಮಕ ಹಾಗೂ ಕಾನೂನು ಸುಧಾರಣೆಗಳನ್ನು ಜಾರಿಗೆ ತಂದಿತು. ಇದರ ಪರಿಣಾಮಕಾರಿಯಾದ ವ್ಯವಸ್ಥೆಯಾಗಿ ರೂಪುಗೊಂಡಿತು. ಮುಖ್ಯ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯಗಳು, ಸೆಷನ್ಸ್ ನ್ಯಾಯಾಲಯಗಳು, ಮುನ್ಸಿಫ್ ನ್ಯಾಯಾಲಯಗಳು ಮತ್ತು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳ ಮೂಲಕ ವಿವಿಧ ಹಂತಗಳಲ್ಲಿ ನ್ಯಾಯವನ್ನು ಸಾರ್ವಜನಿಕರಿಗೆ ತಲುಪಿಸುವ ವ್ಯವಸ್ಥೆ ಬಲಗೊಂಡಿತು. ಭಾರತೀಯು ದಂಡ ಸಂಹಿತೆ, ಅಪರಾಧ ಪ್ರಕ್ರಿಯಾ ಸಂಹಿತೆ ಮತ್ತು ದಿವಾಣಿ ಪ್ರಕ್ರಿಯಾ ಸಂಹಿತೆ ಮೊದಲಾದ ಕಾನೂನುಗಳ ಅನುಷ್ಠಾನದಿಂದ ನ್ಯಾಯ ನಿರ್ವಹಣೆಯಲ್ಲಿ ಏಕರೂಪತೆ, ಪಾರರ್ಶಕತೆ ಮತ್ತು ಕಾನೂನುಬದ್ದತೆ ಹೆಚ್ಚಾಯಿತು. ನ್ಯಾಯಾಧೀಶರ ನೇಮಕಾತಿ, ನ್ಯಾಯಾಲಯಗಳ ಕಾರ್ಯವಿಧಾನ, ಮೇಲ್ಮನವಿ ವ್ಯವಸ್ಥೆ ಹಾಗೂ ನ್ಯಾಯಾಮಗದ ಆಡಳಿತಾತ್ಮಕ ಸುಧಾರಣೆಗಳು ನ್ಯಾಯದ ಗುಣಮಟ್ಟವನ್ನು ಮತ್ತಷ್ಟು ಉತ್ತಮಗೊಳಿಸಿದವು. ಒಟ್ಟಾರೆ ಮೈಸೂರು ರಾಜ್ಯದ ನ್ಯಾಯಾಂಗ ವ್ಯವಸ್ಥೆಯು ಕಾನೂನಿನ ಆಳ್ವಿಕೆಯನ್ನು ಬಲಪಡಿಸುವಲ್ಲಿ ಸಾರ್ವಜನಿಕರಲ್ಲಿ ನ್ಯಾಯದ ಮೇಲಿನ ವಿಶ್ವಾಸವನ್ನು ಹೆಚ್ಚಿಸುವಲ್ಲಿ ಹಾಗೂ ಆಡಳಿತದಲ್ಲಿ ಸುಶಾಸನವನ್ನು ಸ್ಥಾಪಿಸುವಲ್ಲಿ ಮಹತ್ವ ಪಾತ್ರವಹಿಸಿತು. ಈ ವ್ಯವಸ್ಥೆಯ ಅನುಭವಗಳು ಸ್ವಾತಂತ್ರ್ಯಾನಂತರ ಕರ್ನಾಟಕ ರಾಜ್ಯದ ಆಧುನಿಕ ನ್ಯಾಯಾಂಗ ವ್ಯವಸ್ಥೆಯ ನಿರ್ಮಾಣಕ್ಕೂ ಭದ್ರ ಅಡಿಪಾಯವಾಗಿದೆ. ಆದ್ದರಿಂದ ಮೈಸೂರು ರಾಜ್ಯದ ನ್ಯಾಯಾಂಗ ವ್ಯವಸ್ಥೆಯ ಅಧ್ಯಯನವು ಕರ್ನಾಟಕದ ಆಡಳಿತಾತ್ಮಕ ಕಾನೂನು ಹಾಗೂ ನ್ಯಾಯಾಂಗ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಅತ್ಯಂತ ಮಹತ್ವದ್ದಾಗಿದೆ.

**ಆಕರ ಗ್ರಂಥಗಳು**


- ಅಲೆಕ್ಸಾಂಡರ್, ಕೆ ಪೊಲೀಸ್ ರಿಫಾಮ್ಸ್ ಇನ್ ಇಂಡಿಯಾ ಆನ್ ಅನಾಲಿಟಿಕಲ್ ಸ್ಟಡಿ, ಡಿಸ್ಕವರಿ ಪಬ್ಲಿಷಿಂಗ್ ಹೌಸ್, ನ್ಯೂಡೆಲ್ಲಿ ಇಂಡಿಯಾ, 2006
- ದೇವೇಗೌಡ.ಸಿ  ಮೈಸೂರು ಸಂಸ್ಥಾನದ ಆಡಳಿತ ವ್ಯವಸ್ಥೆ ಮತ್ತು ರಾಜಕೀಯ ಮೈಸೂರು 1999.
- ಹೊನ್ನಲಿಂಗಯ್ಯ ಎಸ್. ಆರ್, ಮೈಸೂರು ರಾಜ್ಯದಲ್ಲಿ ಬ್ರಿಟಿಷರ ನ್ಯಾಯಾಡಳಿತ ಮತ್ತು ಪೊಲೀಸ್, ವ್ಯವಸ್ಥೆ (1863–1881) ಅಪ್ರಕಟಿತ ಪ್ರೌಢಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, 1995.
- ಕಾಪ್ಸೆ ಎಸ್.ಆರ್, ಪೊಲೀಸ್ ಆಡ್ಮನಿಸ್ಟ್ರೇಷನ್ ಇನ್ ಬಾಂಬೆ 1600–1865 ಹಿಮಾಲಯ ಪಬ್ಲಿಷಿಂಗ್ ಹೌಸ್ ಬಾಂಬೆ ಇಂಡಿಯಾ, 1987
- ರಾಮೇಗೌಡ.ಸಿ ಮೈಸೂರು ಸಂಸ್ಥಾನದ ಆಡಳಿತಾತ್ಮಕ ಇತಿಹಾಸ (1831–1947) ಜನಪರ ಧೋರಣೆಗಳ ಒಂದು ಅಧ್ಯಯನ, ಅಪ್ರಕಟಿತ ಪ್ರೌಢಪ್ರಬಂಧ, ಕ,ರಾಮು.ವಿ, ಮೈಸೂರು 2009.
- ವೀರಭದ್ರಯ್ಯ ಹೆಚ್.ಎಂ ಕರ್ನಾಟಕ ಪೊಲೀಸ್ ಮ್ಯಾನ್ಯುಯಲ್ (ಭಾಗ–2) ; ಬೆಂಗಳೂರು, ಲಾಯರ್ಸ್ ಲಾ ಬುಕ್, 2004.